# ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಮಾಲೋಚನೆ ಸಭೆ

**ದಿನಾಂಕ: 30-12-2025**




**ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವತಿಯಿಂದ ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಮಾಲೋಚನೆ ಸಭೆ ಏರ್ಪಡಿಸಲಾಗಿತ್ತು.**

ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ವಿಧಾನ ಪರಿಷತ್ತಿನ ಸದಸ್ಯರಾದ ಪುಟ್ಟಣ್ಣನವರು ಸಾರ್ವಜನಿಕ ವಿಶ್ವವಿದ್ಯಾಲಯಗಳಲ್ಲಿ ಶೇ. 90ರಷ್ಟು ಬೋಧಕ ಹುದ್ದೆಗಳು ಖಾಲಿಯಿರುವ ಬಗ್ಗೆ ಅಪಾರ ಕಳವಳ ವ್ಯಕ್ತಪಡಿಸಿದರು.

ಪೋಷಕರು  ಅಂಕ ಗಳಿಕೆಯ ಬಗ್ಗೆಯೇ ವಿದ್ಯಾರ್ಥಿಗಳ ಮೇಲೆ ವಿಪರೀತ ಒತ್ತಡ ಹೇರುವ ಜೊತೆಗೆ ಮೆಡಿಕಲ್, ಇಂಜನಿಯರಿಂಗ್ ಶಿಕ್ಷಣಕ್ಕೆ ಒತ್ತು ನೀಡುತ್ತಿದ್ದು ಪರ್ಯಾಯ ವೃತ್ತಿಪರ ಶಿಕ್ಷಣ ಆಯ್ಕೆಗಳತ್ತ ಗಮನ ಹರಿಸುತ್ತಿಲ್ಲವೆಂದು ವಿವರಿಸಿದರು.

ಪದವಿಪೂರ್ವ ಶಿಕ್ಷಣದ ಹಂತ ನಿರ್ಣಾಯಕವಾಗಿದ್ದು ಪೋಷಕರು ಮತ್ತು ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಭವಿಷ್ಯದ ದಾರಿಯ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡುವ ಅಗತ್ಯವಿದೆ ಎಂದು ಅವರು ಅಭಿಪ್ರಾಯಪಟ್ಟರು.

ಈ ನಿಟ್ಟಿನಲ್ಲಿ ಪದವಿಪೂರ್ವ ಶಿಕ್ಷಣ ಮಂಡಳಿ ತನ್ನ ಶೈಕ್ಷಣಿಕ ಕಾರ್ಯಕ್ರಮಗಳ ಕುರಿತು ಸಕಾಲಿಕ ಮಾಹಿತಿ ಒದಗಿಸಬೇಕೆಂದು ಅವರು ಸೂಚಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಪತಿಗಳಾದ ಪ್ರೊ. ರಮೇಶ್.ಬಿ. ಮಾತನಾಡಿ ದೇಶದಲ್ಲಿ ಉನ್ನತ ಶಿಕ್ಷಣದ ಹಂತದಲ್ಲಿ ಅಪಾರ ಪ್ರಮಾಣದ ವಿದ್ಯಾರ್ಥಿಗಳು ಹೊರಗುಳಿಯುತ್ತಿರುವ ಗಂಭೀರ ಬಿಕ್ಕಟ್ಟಿನ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿದರು.

ಪದವಿಪೂರ್ವ ಮತ್ತು ಪದವಿ ಕಾಲೇಜುಗಳ ನಡುವೆ ಸೂಕ್ತ ಸಮನ್ವಯ ಸಾಧಿಸುವ ಮೂಲಕ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯಗಳ ತೆಕ್ಕೆಗೆ ತರಬಹುದೆಂದು ಅವರು ವಿಶ್ಲೇಷಿಸಿದರು.

ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ವಿವಿಧ ವೃತ್ತಿಪರ ಶಿಕ್ಷಣ ಕೋರ್ಸ್ ಗಳನ್ನು ಆರಂಭಿಸುವ ಜೊತೆಗೆ 14 ವಿದೇಶಿ ಭಾಷೆಗಳನ್ನು ಕಲಿಯುವ ಅವಕಾಶ ತೆರೆದಿಡಲಾಗಿದೆ ಎಂದು ಅವರು ತಿಳಿಸಿದರು.

ಪದವಿಪೂರ್ವ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳಾದ ಮನೋಜ್ ಕುಮಾರ್ ಕೊಳ್ಳ ಮತ್ತು ಪಾಲಾಕ್ಷರವರು ವಿಶ್ವವಿದ್ಯಾನಿಲಯದ ಸಕಾರಾತ್ಮಕ ಉಪಕರಣಗಳನ್ನು ಶ್ಲಾಘಿಸಿ ಬಿಕ್ಕಟ್ಟಿನ ನಿವಾರಣೆಗೆ ಸಹಕರಿಸುವುದಿಲ್ಲ ಭರವಸೆಯಿತ್ತರು.

ಸಿಂಡಿಕೇಟ್ ಸದಸ್ಯರಾದ ಡಾ. ಬಿ.ಆರ್.ಸುಪ್ರೀತ್ ಪ್ರಾಸ್ತಾವಿಕ ಭಾಷಣ ಮಾಡಿದರು. ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ ಪ್ರೊ. ಕೆ. ಶಿವಶಂಕರ್ ವಂದಿಸಿದರು. ಸಮಾಜಕಾರ್ಯ ವಿಭಾಗದ ಉಪನ್ಯಾಸಕರಾದ ವಾಣಿ ಆರಾಧ್ಯ ಕಾರ್ಯಕ್ರಮ ನಿರೂಪಿಸಿದರು.

# Dr. Manmohan Singh Bengaluru City University

## Pre-University College Principals’ Counselling Meet

**Date: 30-12-2025**

Dr. Manmohan Singh Bengaluru City University's College Development Council, organized Pre-University College Principals’ Counselling Meet in collaboration with Pre-University college principals.

In his inaugural address, Puttanna,Member of the Legislative Council, expressed serious concern over the alarming situation of nearly 90% teaching vacancies in public universities.

He also mentioned increasing emphasis placed by parents and educational institutions on students’ academic marks rather than their overall personality development.

He observed that parental pressure often compels students to pursue medical and engineering streams, overlooking alternative skill-oriented and vocational career options.

He remarked that Pre-University education functions as a critical transitional phase, and without proper guidance from parents and institutions, students may be led toward unsuitable career paths.

He further directed the officials of the Pre-University Education Board to effectively disseminate the objectives and goals of the programme among students, parents, and affiliated colleges.

Prof. Ramesh B, Vice-Chancellor of Dr. Manmohan Singh Bengaluru City University, elaborated on the objectives of the counselling meet and presented statistical data on student dropout rates in India.

He cautioned that if this crisis continues, it would adversely affect the nation’s overall development.

Emphasizing the urgency of collaborative initiatives between Pre-University institutions and degree colleges, he outlined several job-oriented programmes introduced by the University during the current academic year.

He also noted that diploma and certificate courses in nearly fourteen foreign languages, along with programmes in artificial intelligence, interior design, digital marketing, and large-scale employment initiatives, sports, and cultural activities, have been launched to ensure holistic student development.

Manojkumar Kolla, Additional Director, Department of School Education (PUC), Bengaluru South District, extended his support to the initiative and appreciated the University’s efforts to address these challenges.

He observed that a significant gap has historically existed between Pre-University and degree colleges due to limited coordinated engagement.

Palaksha, Additional Director, Department of School Education (PUC), Bengaluru North District, commended the initiative and described it as the first of its kind among state universities in Karnataka.

Members of the Syndicate and Academic Council were present on the occasion. Dr. Supreeth, Syndicate Member, welcomed the gathering, Prof. Shivashankar proposed the vote of thanks, and Ms. Vani compered the programme.


ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
DR. MANMOHAN SINGH
BENGALURU CITY UNIVERSITY
ಕಾಲೇಜು ಅಭಿವೃದ್ಧಿ ಮಂಡಳಿ
ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರೊಡನೆ ಸಮಾಲೋಚನಾ ಸಭೆ








MANMOHAN SINGH


ಮತ್ತು ಪದವಿ ಪೂರ್ವ
ದಿನಾಂಕ &


ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸಂಯೋಜಿತ ಕಾಲೇಜು ಮತ್ತು ಪದವಿ ಪೂರ್ವ
ದಿನಾಂಕ &
30.12.2025, ಮಂಗಳವಾರ


ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
DR. MANMOHAN SINGH
BENGALURU CITY UNIVERSITY
BEBOUNDLESS
ಕಾಲೇಜು ಅಭಿವೃದ್ಧಿ ಮಂಡಳಿ
ಸಂಯೋಜಿತ ಕಾಲೇಜು ಮತ್ತು ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರೊಡನೆ ಸಮಾಲೋಚನಾ ಸಭೆ
ದಿನಾಂಕ & ಸಮಯ:
30.12.2025, ಮಂಗಳವಾರ ಸಮಯ: ಬೆಳಗ್ಗೆ 11.00 ಗಂಟೆಗೆ
ಸ್ಥಳ:


ಡಾ. ಮನಮೋಹನ್ ಸಿಂಗ್
DR. MANMOHAN SINGH


ಡಾ. ಮನಮೋಹನ್ ಸಿಂಗ್


ಡಾ. ಮನಮೋಹನ್ ಸಿಂಗ್
DR. MANMOHAN SINGH
BENGALURU CITY UNIVERSITY
BEBOUNDLESS
ಕಾಲೇಜು ಅಭಿವೃದ್ಧಿ ಮಂಡಳಿ






MANMOHAN SINGH


ಡಾ. ಮನಮೋಹನ್ ಸಿಂಗ್
DR. MANMOHAN SINGH
BENGALURU CITY UNIVERSITY

# ‘ವೈದ್ಯಕೀಯ, ಎಂಜಿನಿಯರಿಂಗ್ ಹೊರತಾದ ವೃತ್ತಿಪರ ಶಿಕ್ಷಣ ಅಗತ್ಯ’



ಮುಖ್ಯ ಅತಿಥಿ ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಅವರನ್ನು ಸನ್ಮಾನಿಸಲಾಯಿತು. ಕುಲಪತಿ ಬಿ. ರಮೇಶ್ ಮತ್ತಿತರರು ಇದ್ದರು

ಪ್ರಜಾವಾಣಿ ವಾರ್ತೆ 31/12/25

ಬೆಂಗಳೂರು: ‘ಪೋಷಕರು ಅಂಕ ಗಳಿಕೆ ಬಗ್ಗೆ ವಿದ್ಯಾರ್ಥಿಗಳ ಮೇಲೆ ವಿಪರೀತ ಒತ್ತಡ ಹೇರುವ ಜೊತೆಗೆ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿದ್ದಾರೆ. ಪರ್ಯಾಯ ವೃತ್ತಿಪರ ಶಿಕ್ಷಣದ ಆಯ್ಕೆಗಳತ್ತ ಗಮನಹರಿಸುತ್ತಿಲ್ಲ’ ಎಂದು ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಅಸಮಾಧಾನ ವ್ಯಕ್ತಪಡಿಸಿದರು.

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ವತಿಯಿಂದ ಸೆಂಟ್ರಲ್ ಕಾಲೇಜು ಆವರಣದಲ್ಲಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಮಂಗಳವಾರ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಮಾಲೋಚನೆ ಸಭೆ ಏರ್ಪಡಿಸಲಾಗಿತ್ತು. ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ‘ನಿರ್ಣಾಯಕ ಹಂತವಾದ ಪದವಿ ಪೂರ್ವ ಶಿಕ್ಷಣದಲ್ಲಿ ಪೋಷಕರು ಮತ್ತು ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಭವಿಷ್ಯದ ಕುರಿತ ಸೂಕ್ತ ಮಾರ್ಗದರ್ಶನ ನೀಡುವ ಅಗತ್ಯವಿದೆ’ ಎಂದು ಅಭಿಪ್ರಾಯಪಟ್ಟರು.

‘ಪದವಿಪೂರ್ವ ಶಿಕ್ಷಣ ಮಂಡಳಿ ತನ್ನ ಶೈಕ್ಷಣಿಕ ಕಾರ್ಯಕ್ರಮಗಳ ಕುರಿತು ಸಕಾಲಿಕ ಮಾಹಿತಿ ಒದಗಿಸಬೇಕು. ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಶೇ 90ರಷ್ಟು ಬೋಧಕ ಹುದ್ದೆಗಳು ಖಾಲಿ ಇರುವುದು ಕಳವಳಕಾರಿ’ ಎಂದರು.

ಅಧ್ಯಕ್ಷತೆ ವಹಿಸಿದ್ದ ಕುಲಪತಿ ಬಿ. ರಮೇಶ್ ಮಾತನಾಡಿ, ‘ಉನ್ನತ ಶಿಕ್ಷಣ ಹಂತದಲ್ಲಿ ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹೊರಗೆ ಉಳಿಯುತ್ತಿರುವುದು ಗಂಭೀರ ಬಿಕ್ಕಟ್ಟು ಸೃಷ್ಟಿಸುತ್ತಿದೆ’ ಎಂದು ಆತಂಕ ವ್ಯಕ್ತಪಡಿಸಿದರು.